Dr. K. Shivaramu
Senior Information Specialist and Head
ಡಾ|| ಕೆ.ಶಿವರಾಮು
ಹಿರಿಯ ವಾರ್ತಾತಜ್ಞರು ಮತ್ತು ಮುಖ್ಯಸ್ಥರು
Mob(ಮೊ):99720 35456

# University of Agricultural Sciences, Bangalore
# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

Farm Informaltion Unit, Directorate of Extension
ಕೃಷಿ ಮಾಹಿತಿ ಘಟಕ, ವಿಸ್ತರಣಾ ನಿರ್ದೇಶನಾಲಯ
GKVK, Bengaluru-560 065 ಜಿಕೆವಿಕೆ, ಬೆಂಗಳೂರು-560 065
Email (ಮಿಂಚಂಚೆ): sisuasb@gmail.com

ಕ್ರ.ಸಂ: ವಿನಿ/ಕೃಮಾಘ/ಪತ್ರಿಕಾ ಪ್ರಕಟಣೆ/2024-25 ದಿನಾಂಕ: 27-10-2024

ಗೆ,
ಸಂಪಾದಕರು
____________
____________

**ಪತ್ರಿಕಾ ಪ್ರಕಟಣೆ**

**ಮಾನ್ಯರೆ,**

**ವಿಷಯ:** ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನಲ್ಲಿ **"ಕೃಷಿ ಪರಿಸರದಲ್ಲಿ ವಿಶೇಷ ಚೇತನರೊಂದಿಗೆ ಒಂದು ದಿನ"** ಕಾರ್ಯಕ್ರಮದ ಉದ್ಘಾಟನೆ..

*****

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನಲ್ಲಿ **"ಕೃಷಿ ಪರಿಸರದಲ್ಲಿ ವಿಶೇಷ ಚೇತನರೊಂದಿಗೆ ಒಂದು ದಿನ"** ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ:27-10-2024 ರಂದು ನೆರವೇರಿತು. ಕಾರ್ಯಕ್ರಮವನ್ನು ಸಸಿಗೆ ನೀರು ಎರೆಯುವ ಮೂಲಕ **ಡಾ: ಎಸ್.ವಿ.ಸುರೇಶ್,** ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ರವರು ಉದ್ಘಾಟಿಸಿ ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು, ಕೃಷಿ ಸಂಶೋಧನೆ, ಬೋಧನೆ ಹಾಗೂ ವಿಸ್ತರಣೆಯ ಮೂಲಕ ರೈತರನ್ನು ಆರ್ಥಿಕವಾಗಿ ಸಧೃಡರನ್ನಾಗಿಸಲು ಸದಾಕಾಲ ಸಿದ್ಧವಾಗಿದೆ. ಅದೇ ರೀತಿ ವಿಶೇಷ ಚೇತನರೂ ಸಹ ಈ ಸಮಾಜದ ಒಂದು ಅವಿಭಾಜ್ಯ ಅಂಗವಾಗಿದ್ದು, ಇವರಿಗೂ ಸಮಾನ ಹಕ್ಕು ಮತ್ತು ಅವಕಾಶಗಳನ್ನು ಕಲ್ಪಿಸುವುದು ನಮ್ಮೆಲ್ಲರ ಜವಾಬ್ದಾರಿ. ಆದಾಗ್ಯೂ, ಅಲ್ಲಲ್ಲಿ ಈ ಅವಕಾಶ ವಂಚಿತರನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನಗಳು ನಡೆಯುತ್ತಿವೆ. ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ಅದರಲ್ಲೂ ವಿಶೇಷವಾಗಿ ಇಂದಿನ ಯಾಂತ್ರೀಕೃತ ಜಗತ್ತಿನಲ್ಲಿ ಕೃಷಿ ಮತ್ತು ಪರಿಸರದತ್ತ ಈ ವಿಶೇಷಚೇತನರನ್ನು ಸೆಳಯುವುದು ಹೆಚ್ಚು ಸೂಕ್ತವಾಗಿದೆ. ಇದೇ ನವೆಂಬರ್ 14 ರಿಂದ 17 ರ ವರೆಗೆ ಆಯೋಜಿಸಿರುವ ವಿಶ್ವವಿದ್ಯಾನಿಲಯದ ವಾರ್ಷಿಕ **"ಕೃಷಿಮೇಳ"**ಕ್ಕೆ ಲಕ್ಷಾಂತರ ಕೃಷಿಕರ ನಿರೀಕ್ಷೆಯಲ್ಲಿದ್ದು, ಎಲ್ಲೋ ಒಂದೆಡೆ ಈ ಬೃಹತ್ ಕೃಷಿಮೇಳಕ್ಕೆ ಹೆಚ್ಚಿನ ಜನಸಂದಣೆ ಕಾರಣ ದೈಹಿಕ ವಿಶೇಷ ಚೇತನರ ಭಾಗವಹಿಸುವಿಕೆ ಕಷ್ಟ ಸಾಧ್ಯವಾಗಿರುವ ಹಿನ್ನಲೆಯಲ್ಲಿ ಕೃಷಿಮೇಳದ ಪೂರ್ವದಲ್ಲಿಯೇ ಜಿಕೆವಿಕೆ ಆವರಣವನ್ನು ಹಾಗೂ ಇಲ್ಲಿಯ ಪರಿಸರ, ವೈವಿಧ್ಯಮಯ ಬೆಳೆ, ಬೆಳೆಪದ್ಧತಿಗಳನ್ನು, ಉದ್ಯಾನಗಳನ್ನು ವೀಕ್ಷಣೆಗೆ ಅನುವು ಮಾಡಿಕೊಡುವುದು ಈ ಕಾರ್ಯಕ್ರಮದ ಉದ್ದೇಶ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ವಿಶೇಷ ಚೇತನರಿಗಾಗಿಯೇ ಪರಿಸರ ವೀಕ್ಷಣೆಯ ಜೊತೆ ವಿಶೇಷ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ದಿ ಅಸೋಸಿಯೆಷನ್ ಆಫ್ ಪೀಪಲ್ ವಿತ್ ಡಿಸೆಬಲಿಟಿ, ವಾಯ್ಸ್ ಆಫ್ ನೀಡಿ ಫೌಂಡೇಶನ್, ಕಲ್ಪವೃಕ್ಷ, ಬೆಳಕು ಹಾಗೂ ಇತರೆ ಸಂಬಂಧಿತ ಸಂಸ್ಥೆಗಳ 230ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು. **ಡಾ: ಹೆಚ್.ಎಸ್. ಶಿವರಾಮು,** ಸಂಶೋಧನಾ ನಿರ್ದೇಶಕರು, **ಡಾ: ವಿ.ಎಲ್. ಮಧುಪ್ರಸಾದ್,** ವಿಸ್ತರಣಾ ನಿರ್ದೇಶಕರು, **ಡಾ. ಎನ್.ಬಿ. ಪ್ರಕಾಶ್,** ಡೀನ್ (ಕೃಷಿ), **ಡಾ. ಮೋಹನ್ ಈಶ್ವರ್ ನಾಯ್ಕ,** ಡೀನ್ (ವಿದ್ಯಾರ್ಥಿ ಕಲ್ಯಾಣ) ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು, ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳಾದ **ಡಾ. ಟಿ. ಕೆ. ಪ್ರಭಾಕರ ಶೆಟ್ಟಿ, ಡಾ. ಹೆಚ್. ಎಲ್. ಹರೀಶ್, ಡಾ. ಎಂ. ಚಂದ್ರೇಗೌಡರವರು** ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ತಾವು ತಮ್ಮ ಮಾಧ್ಯಮದಲ್ಲಿ ವಿಶೇಷಚೇತನರ/ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**(ಕೆ. ಶಿವರಾಮು)**
ಹಿರಿಯ ವಾರ್ತಾತಜ್ಞರು ಮತ್ತು ಮುಖ್ಯಸ್ಥರು